ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

5

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತಿನ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ          ದಿನಾಂಕ : DATE : 13/12/20


# ಸರ್ಕಾರದೊಂದಿಗೆ ಸಭಾಪತಿ ಸಂಘರ್ಷಕ್ಕೆ 'ಬ್ರೇಕ್'

ಬೆಂಗಳೂರು: ಸರ್ಕಾರ ಸೂಚನೆಯಂತೆ ಡಿ. 10ರಂದು ಅನಿರ್ದಿಷ್ಟಾವಧಿಗೆ ಮುಂದೂಡಿಕೆಯಾಗಿದ್ದ ವಿಧಾನ ಪರಿಷತ್ ಕಲಾಪ ಡಿ. 15ಕ್ಕೆ ಒಂದು ದಿನ ಮತ್ತೆ ನಿಗದಿಯಾಗಿದೆ. ಈ ಮೂಲಕ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ಹಾಗೂ ಸರ್ಕಾರದ ನಡುವಿನ ಸಂಘರ್ಷಕ್ಕೆ ತಾತ್ಕಾಲಿಕ ತೆರೆ ಬಿದ್ದಿದೆ.ಆದರೆ, ಒಂದು ದಿನದ ಕಲಾಪದಲ್ಲಿ ಸಭಾಪತಿ ಪದಚ್ಯುತಿ ವಿಚಾರ ಚರ್ಚೆ ನಡೆಸಲು ಬಿಜೆಪಿ ಉತ್ಸಾಹದಲ್ಲಿದ್ದು ಕಾಂಗ್ರೆಸ್ ಕಾನೂನಾತ್ಮಕ ಹಜ್ಜೆ ಇಡಲು ಸಜ್ಜಾಗಿದೆ. ಜೆಡಿಎಸ್ ತನ್ನ ತೀರ್ಮಾನ ಏನು ಎಂಬುದು ಆ ಸಂದರ್ಭದಲ್ಲಿ ತೆಗೆದುಕೊಳ್ಳುವುದಾಗಿ ಹೇಳಿರುವುದು ಕುತೂಹಲ ಮೂಡಿಸಿದೆ. ಗೋಹತ್ಯೆ ನಿಷೇಧ ಸಂಬಂಧ ವಿಧೇಯಕ ಮಂಡನೆಯೂ ಮಂಗಳವಾರ ಆಗಲಿದೆಯೇ ಎಂಬುದರ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲ.

ಕಲಾಪದಲ್ಲಿ ಮೊದಲಿಗೆ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿ ವಿಚಾರ ಪ್ರಸ್ತಾಪಿಸಿ ಚರ್ಚಿಸಲು ಬಿಜೆಪಿ ನಿರ್ಧರಿಸಿದೆ. ಸಭಾಪತಿ ಪದಚ್ಯುತಿ ವಿಚಾರದಲ್ಲಿ ಜೆಡಿಎಸ್‌ನಿಂದ ಬೆಂಬಲ ದೊರೆಯುವ ನಿರೀಕ್ಷೆಯಲ್ಲಿದೆ. ಆದರೆ ಒಂದು ಬಾರಿ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ಬಳಿಕ ಅವಿಶ್ವಾಸ ನಿರ್ಣಯ ಗೊತ್ತುವಳಿಯೂ ಅನೂರ್ಜಿತವಾಗುತ್ತದೆ. ಹೀಗಾಗಿ ಮುಂದಿನ ಅಧಿವೇಶನದಲ್ಲಿ ಅವಿಶ್ವಾಸ ನಿರ್ಣಯ ಗೊತ್ತುವಳಿ ಮಂಡಿಸುವುದು ಅನಿವಾರ್ಯ ಎಂಬ ಮಾತುಗಳೂ ಕೇಳಿಬರುತ್ತಿವೆ.

ಒಂದೊಮ್ಮೆ ಗೊತ್ತುವಳಿ ಚರ್ಚೆಗೆ ಅವಕಾಶ ಇಲ್ಲ ಎಂದಾದರೆ ಬಿಜೆಪಿ ಹಾಗೂ ಸಭಾಪತಿ ನಡುವೆ ಜಟಾಪಟಿ ಮುಂದುವರಿಯುವ ಸಾಧ್ಯತೆ ಇದೆ.ಪರಿಷತ್‌ನಲ್ಲಿ ಸಂಖ್ಯಾಬಲ 31ಕ್ಕೆ ಏರಿಕೆ ಹಿನ್ನೆಲೆಯಲ್ಲಿ ಸಭಾಪತಿ ಸ್ಥಾನದ ಮೇಲೆ ಕಣ್ಣಿಟ್ಟಿರುವ ಬಿಜೆಪಿ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿ ಮಂಡಿಸಿತ್ತು. ಆದರೆ,

> ಮಂಗಳವಾರದ ಕಲಾಪದಲ್ಲಿ ಸಭಾಪತಿ ವಿರುದ್ಧ ಅವಿಶ್ವಾಸ ಮಂಡಿಸಿದರೆ ವಿರೋಧಿಸಲು ಕಾಂಗ್ರೆಸ್ ನಿರ್ಧರಿಸಿದೆ. ತುರ್ತು ಅಧಿವೇಶನ ಕರೆಯುವ ಅಗತ್ಯತೆ ಸದ್ಯಕ್ಕೆ ಇರಲಿಲ್ಲ. ಸಭಾಪತಿ ವಿರುದ್ಧ ಬಿಜೆಪಿ ನೀಡಿದ್ದ ನೋಟಿಸ್ ನಿಯಮದ ಪ್ರಕಾರ ಇಲ್ಲ ಎಂದು ಸಭಾಪತಿ ತಿರಸ್ಕರಿಸಿದ್ದು ಮತ್ತೆ ಅದೇ ವಿಷಯದ ಮೇಲೆ ಚರ್ಚೆಗೆ ಅವಕಾಶ ಇಲ್ಲ.
>
> • ಎಂ.ನಾರಾಯಣಸ್ವಾಮಿ, ಪ್ರತಿಪಕ್ಷದ ಮುಖ್ಯ ಸಚೇತಕ

ಕಾನೂನುತಜ್ಞರೊಂದಿಗೆ ಚರ್ಚಿಸಿ ಪ್ರಸ್ತಾವ ತಿರಸ್ಕರಿಸಿರುವುದಾಗಿ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ಸದನಕ್ಕೆ ತಿಳಿಸಿದ್ದರು. ಈ ನಡುವೆ ಗೊತ್ತುವಳಿ ಮಂಡನೆಯಾಗಿ 14ನೇ ದಿನವಾದ ಡಿ.10ರಂದು ಸಭಾಪತಿ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ್ದರು. ಇದು ಬಿಜೆಪಿಯ ಆಕ್ರೋಶಕ್ಕೆ ಕಾರಣವಾಗಿತ್ತು.

ಆ ಹಿನ್ನೆಲೆಯಲ್ಲಿ ಬಿಜೆಪಿ ನಿಯೋಗವೊಂದು ಶುಕ್ರವಾರ ರಾಜ್ಯಪಾಲ ವಜುಭಾಯಿ ವಾಲಾ ಅವರನ್ನು ಭೇಟಿಯಾಗಿ ಡಿ.15ರಂದು ಕಲಾಪ ನಡೆಸಲು ಸಭಾಪತಿಗಳಿಗೆ ಸೂಚನೆ ನೀಡುವಂತೆ ಮನವಿ ಮಾಡಿತ್ತು. ಜತೆಗೆ ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ ಕಾರ್ಯದರ್ಶಿಗಳು ವಿಧಾನ ಪರಿಷತ್ ಕಾರ್ಯದರ್ಶಿಗಳಿಗೆ ಪತ್ರ ಬರೆದು ಡಿ.15ರಂದು ಒಂದು ದಿನ ಕಲಾಪ ನಡೆಸುವಂತೆ ಮನವಿ ಮಾಡಿದ್ದರು.

**ಸಂಘರ್ಷಕ್ಕೆ 'ಬ್ರೇಕ್':** ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ ಕಾರ್ಯದರ್ಶಿ ಮನವಿ ಸಲ್ಲಿಸಿದ್ದರೂ ಕಲಾಪ ನಡೆಸಲು ಸೂಚಿಸುವುದು, ಬಿಡುವುದು

> ಡಿ.15ರಂದು ಕಲಾಪ ನಿಗದಿಯಾಗಿದೆ. ಅಂದು ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆ ಇತರೆ ಅಂಶ ಕಾರ್ಯಸೂಚಿಯಲ್ಲಿರಲಿವೆ. ಅವಿಶ್ವಾಸ ನಿರ್ಣಯದ ಗೊತ್ತುವಳಿ ಕುರಿತ ಚರ್ಚೆಗೂ ಅವಕಾಶ ನೀಡುತ್ತಾರೆ ಎಂಬ ವಿಶ್ವಾಸವಿದೆ. ಗೋಹತ್ಯೆ ನಿಷೇಧ ಸಂಬಂಧ ವಿಧೇಯಕ ಮಂಡಿಸುವ ಬಗ್ಗೆ ಚರ್ಚಿಸಿ ತೀರ್ಮಾನಿಸಲಿದ್ದೇವೆ.
>
> • ಕೋಟ ಶ್ರೀನಿವಾಸ ಪೂಜಾರಿ, ವಿಧಾನ ಪರಿಷತ್ ಸಭಾನಾಯಕ

ಸಭಾಪತಿಗಳ ವಿವೇಚನೆಗೆ ಸೇರಿದೆ. ಆದರೆ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ಅವರು ಮಂಗಳವಾರ ಕಲಾಪಕ್ಕೆ ಅವಕಾಶ ನೀಡಿರುವುದರಿಂದ ಸಂಘರ್ಷಕ್ಕೆ 'ಬ್ರೇಕ್' ಬಿದ್ದಂತಿದೆ. ಆದರೆ ಮಂಗಳವಾರ ಯಾವೆಲ್ಲಾ ವಿಚಾರ ಪ್ರಸ್ತಾಪ ಆಗಲಿದೆ ಎಂಬ ಕುತೂಹಲ ಮೂಡಿದೆ.

**ಅವಿಶ್ವಾಸ ಗೊತ್ತುವಳಿ ಅನೂರ್ಜಿತ:** ವಿಧಾನ ಪರಿಷತ್ ಕಲಾಪ ಒಮ್ಮೆ ಅನಿರ್ದಿಷ್ಟಾವಧಿಗೆ ಮುಂದೂಡಿಕೆಯಾದರೆ ಅವಿಶ್ವಾಸ ನಿರ್ಣಯ ಗೊತ್ತುವಳಿ ಅನೂರ್ಜಿತವಾಗಲಿದೆ. ಬಾಕಿ ಉಳಿದ ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆ, ಶೂನ್ಯವೇಳೆ ಇತರೆ ಕಾರ್ಯಸೂಚಿಗಳನ್ನಷ್ಟೇ ನಡೆಸಬಹುದಾಗಿರುತ್ತದೆ. ಹಾಗಾಗಿ ಮುಂದಿನ ವಿಧಾನಮಂಡಲ ಅಧಿವೇಶನದಲ್ಲೇ ಹೊಸದಾಗಿ ಎಲ್ಲ ಪ್ರಕ್ರಿಯೆ ನಡೆಸಬೇಕಾಗುತ್ತದೆ ಎಂದು ನಿಯಮ ಹೇಳುತ್ತದೆ. ಗೊತ್ತುವಳಿ ಮಂಡಿಸಿದ ಸದಸ್ಯರಿಗೆ ಸಭಾಪತಿಗಳು ಹಿಂಬರಹ ನೀಡಿದ್ದಾರೆ ಎಂಬ ಮಾಹಿತಿ ಇದೆ ಎಂಬುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.